# ನಿಮ್ಮೊಡನೆ

## ಕ್ರಿಕೆಟ್ 'ನಿಯಂತ್ರಣ'ದ ವಿವಾದ

ಬಿಸಿಸಿಐ ಎಂದರೆ– ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ. ಈ ಸ್ವಾಯತ್ತ ಸಂಸ್ಥೆಯ ಹೆಸರಲ್ಲೇ 'ನಿಯಂತ್ರಣ' ಎಂಬ ಶಬ್ದ ಇದೆ. ಆದರೆ ಈ ಮಂಡಳಿ ನಿಜಕ್ಕೂ ಯಾರ ನಿಯಂತ್ರಣದಲ್ಲಿದೆ? ಹಾಗೆ ನಿಯಂತ್ರಣ ಮಾಡುವವರಿಗೂ, ಕ್ರಿಕೆಟ್‌ಗೂ ಏನಾದರೂ ಸಂಬಂಧ ಇದೆಯೆ? ರಾಜಕೀಯ ನೇತಾರರು, ಶ್ರೀಮಂತ ಉದ್ಯಮಿಗಳು ಸೇರಿ ಕ್ರಿಕೆಟ್ ಎಂಬ ಕ್ರೀಡೆಯನ್ನು ನಿಯಂತ್ರಿಸಬೇಕಾದ ಅಗತ್ಯವಿದೆಯೆ? ಭಾರತದಲ್ಲಿ ಕ್ರಿಕೆಟ್ ಆಟಗಾರರು ಅತ್ಯುತ್ತಮ ಪ್ರದರ್ಶನ ನೀಡುವುದಕ್ಕೂ ಈ ಕ್ರಿಕೆಟ್ 'ನಿಯಂತ್ರಣ'ಕ್ಕೂ ಸಂಬಂಧವಿದೆಯೆ?

ಹಣದ ಬಗ್ಗೆ, ನಿಯಮಗಳ ಬಗ್ಗೆ ಬಿಸಿಸಿಐ ಪ್ರಾಮಾಣಿಕವಾಗಿದ್ದರೆ ಆರ್‌ಟಿಐ ವ್ಯಾಪ್ತಿಗೆ ಬರಲು ತೊಂದರೆ ಏನಿದೆ? ಬಿಸಿಸಿಐ ಸಹಿತ ಎಲ್ಲ ಕ್ರೀಡಾ ಸಂಸ್ಥೆಗಳೂ ತಮ್ಮ ಆಡಳಿತ ಮಂಡಳಿಯಲ್ಲಿ ಶೇಕಡಾ 25ರಷ್ಟು ಆಯಾ ಕ್ಷೇತ್ರದ ಕ್ರೀಡಾಪಟುಗಳಿಗೆ ಪ್ರಾತಿನಿಧ್ಯ ನೀಡಬೇಕು ಎಂದೂ ಹೊಸ ಮಸೂದೆಯಲ್ಲಿದೆ. ಈ ಮಸೂದೆ ಕಾನೂನಾದರೆ ಕ್ರಿಕೆಟ್, ಹಾಕಿ, ಸೈಕ್ಲಿಂಗ್ ಮುಂತಾದ ಕ್ರೀಡಾ ಸಂಸ್ಥೆಗಳು ಕೆಲವೇ ಕೆಲವು ರಾಜಕಾರಣಿಗಳ 'ನಿಯಂತ್ರಣ'ದಲ್ಲಿ ಇರುವುದು ತಪ್ಪುತ್ತದೆ.

ಇಂತಹ ಪ್ರಶ್ನೆಗಳು ಇದೀಗ ದೇಶಾದ್ಯಂತ ವ್ಯಾಪಕ ಚರ್ಚೆಗೆ ಒಳಗಾಗಿವೆ. ಕ್ರಿಕೆಟ್‌ನ ಜತೆಗೇ ದೇಶದ ಇತರ ಕ್ರೀಡಾ ಸಂಸ್ಥೆಗಳನ್ನೂ ಸಾರ್ವಜನಿಕರಿಗೆ, ಸರಕಾರಕ್ಕೆ ಉತ್ತರದಾಯಿಯನ್ನಾಗಿ ಮಾಡಬೇಕೆಂಬ ಸಲಹೆಗೆ ಪರ–ವಿರೋಧ ವ್ಯಕ್ತವಾಗುತ್ತಿದೆ. ಕೇಂದ್ರ ಸರಕಾರ ರೂಪಿಸಿರುವ 'ರಾಷ್ಟ್ರೀಯ ಕ್ರೀಡಾ (ಅಭಿವೃದ್ಧಿ) ಮಸೂದೆ' ಈ ಚರ್ಚೆಗೆ ಕುಮ್ಮಕ್ಕು ನೀಡಿದೆ. ಈ ಮಸೂದೆಯನ್ನು ಕೇಂದ್ರ ಸಚಿವ ಸಂಪುಟದ ಮುಂದೆ ಮಂಡಿಸಿದಾಗ, ಸಂಪುಟದಲ್ಲೇ ಇರುವ ಬಿಸಿಸಿಐ ನಿಯಂತ್ರಕರಾದ ಶರದ್ ಪವಾರ್, ಫಾರೂಕ್ ಅಬ್ದುಲ್ಲಾ ಮತ್ತಿತರ ಪ್ರಭಾವಶಾಲಿ ಸಚಿವರು ಈ ಮಸೂದೆಯನ್ನು ತಿರಸ್ಕರಿಸಿದ್ದಾರೆ.

'ಕೇಂದ್ರ ಸರಕಾರದ ಉದ್ದೇಶಿತ ಕ್ರೀಡಾ ಮಸೂದೆಯ ವ್ಯಾಪ್ತಿಗೆ ಬಿಸಿಸಿಐ ಬಂದರೆ, ಕ್ರಿಕೆಟ್‌ಗೆ ತೊಂದರೆ ಆಗುತ್ತದೆ; ಸರಕಾರ ಕ್ರೀಡೆಯ ವಿಷಯದಲ್ಲಿ ಅನಗತ್ಯ ಹಸ್ತಕ್ಷೇಪ ಮಾಡಲು ಈ ಕಾನೂನು ನೆರವಾಗುತ್ತದೆ' ಎನ್ನುವುದು ಮಸೂದೆ ವಿರೋಧಿಗಳ ವಾದ. 'ಬಿಸಿಸಿಐ ಮುಂತಾದ ಕ್ರೀಡಾ ಸಂಸ್ಥೆಗಳು ಈಗಿನಂತೆಯೇ ಸ್ವಾಯತ್ತವಾಗಿದ್ದರೆ ಕ್ರೀಡೆಯಲ್ಲಿ ಉನ್ನತಿ ಸಾಧ್ಯ. ಈಗ ಕ್ರಿಕೆಟ್‌ನಲ್ಲಿ ನಾವು ವಿಶ್ವ ಚಾಂಪಿಯನ್ ಆಗಿಲ್ಲವೆ?' ಎಂದು ಇವರು ತಮ್ಮ ವಾದಕ್ಕೆ ಸಮರ್ಥನೆ ನೀಡುತ್ತಾರೆ.

'ಬಿಸಿಸಿಐ ಕೋಟಿಗಟ್ಟಳೆ ಹಣದ ವಹಿವಾಟು ನಡೆಸುತ್ತಿದೆ. ಅಲ್ಲಿನ ಆಡಳಿತ ಪಾರದರ್ಶಕವಾಗಿಲ್ಲ. ಹೊಸ ಮಸೂದೆ ಕಾನೂನಾದರೆ ಬಿಸಿಸಿಐ ಸಹಿತ ಎಲ್ಲ ಸ್ವಾಯತ್ತ ಕ್ರೀಡಾಸಂಸ್ಥೆಗಳೂ ಮಾಹಿತಿ ಹಕ್ಕು ಕಾಯ್ದೆಯಡಿ ಬರುತ್ತವೆ. ಆಗ ಸಾರ್ವಜನಿಕರೂ ಲೆಕ್ಕ ಕೇಳಬಹುದು. ಸರಕಾರದ ಬಿಸಿಸಿಐ ಗೆ ತೆರಿಗೆ ವಿನಾಯ್ತಿ ನೀಡಿದೆ. ಕ್ರಿಕೆಟ್ ಪಂದ್ಯ ನಡೆಯುವ ವೇಳೆಗೆ ಸರಕಾರವೇ ತನ್ನ ಪೊಲೀಸ್ ಮೂಲಕ ಭದ್ರತೆ ನೀಡುತ್ತದೆ. ಇಷ್ಟೆಲ್ಲ ಇರುವಾಗ ಪಾರದರ್ಶಕವಾಗಿ, ಸಾರ್ವಜನಿಕರಿಗೆ ಉತ್ತರದಾಯಿಯಾಗಿ ಇರಲು ಬಿಸಿಸಿಐ ಗೆ ತೊಂದರೆ ಏನು?' ಎನ್ನುವುದು ಕೇಂದ್ರ ಕ್ರೀಡಾ ಸಚಿವ ಅಜಯ್ ಮಾಕನ್ ಅವರ ಪ್ರಶ್ನೆ.

ಸಚಿವರ ಪ್ರಶ್ನೆಗಳು ಸೂಕ್ತವಾಗಿಯೇ ಇವೆ. ಹಣದ ಬಗ್ಗೆ, ನಿಯಮಗಳ ಬಗ್ಗೆ ಬಿಸಿಸಿಐ ಪ್ರಾಮಾಣಿಕವಾಗಿದ್ದರೆ ಆರ್‌ಟಿಐ ವ್ಯಾಪ್ತಿಗೆ ಬರಲು ತೊಂದರೆ ಏನಿದೆ? ಬಿಸಿಸಿಐ ಸಹಿತ ಎಲ್ಲ ಕ್ರೀಡಾ ಸಂಸ್ಥೆಗಳೂ ತಮ್ಮ ಆಡಳಿತ ಮಂಡಳಿಯಲ್ಲಿ ಶೇಕಡಾ 25ರಷ್ಟು ಆಯಾ ಕ್ಷೇತ್ರದ ಕ್ರೀಡಾಪಟುಗಳಿಗೆ ಪ್ರಾತಿನಿಧ್ಯ ನೀಡಬೇಕು ಎಂದೂ ಹೊಸ ಮಸೂದೆಯಲ್ಲಿದೆ. ಈ ಮಸೂದೆ ಕಾನೂನಾದರೆ ಕ್ರಿಕೆಟ್, ಹಾಕಿ, ಸೈಕ್ಲಿಂಗ್ ಮುಂತಾದ ಕ್ರೀಡಾ ಸಂಸ್ಥೆಗಳು ಕೆಲವೇ ಕೆಲವು ರಾಜಕಾರಣಿಗಳ 'ನಿಯಂತ್ರಣ'ದಲ್ಲಿ ಇರುವುದು ತಪ್ಪುತ್ತದೆ. ಕೆಲವು ಸಂಸ್ಥೆಗಳಲ್ಲಿ ರಾಜಕಾರಣಿಗಳು 20–25 ವರ್ಷಗಳಿಂದ ಆಡಳಿತಗಾರರಾಗಿ ಪಟ್ಟಭದ್ರರಾಗಿ ಕುಳಿತಿದ್ದಾರೆ!

ಕ್ರೀಡಾ ಮಸೂದೆ ಕಾನೂನಾದರೆ ಪ್ರತಿಭಾವಂತ ಕ್ರಿಕೆಟಿಗರು, ಸೈಕ್ಲಿಸ್ಟ್‌ಗಳು, ಹಾಕಿ ಪಟುಗಳು ರಾಷ್ಟ್ರೀಯ ತಂಡದಲ್ಲಿ ಅರ್ಹತೆಯಿಂದಲೇ ಸ್ಥಾನ ಪಡೆಯಲು ಸಾಧ್ಯವಾಗಬಹುದು. ಜತೆಗೆ ಕ್ರಿಕೆಟ್ ಆಟಗಾರರು ಮಾತ್ರ ಪಂಚತಾರಾ ಸೌಲಭ್ಯ ಅನುಭವಿಸಿ, ಇತರ ಕ್ರೀಡಾಪಟುಗಳು ಮೂರನೇ ದರ್ಜೆ ಪ್ರಜೆಗಳಂತೆ ಇರುವ ತಾರತಮ್ಯವೂ ನಿವಾರಣೆಯಾಗಬಹುದು. ಜತೆಗೆ ಕಾರ್ಪೊರೇಟ್ ವಲಯ ಎಲ್ಲ ತರಹದ ಕ್ರೀಡೆಯಲ್ಲಿ ಹಣ ಹೂಡುವಂತೆ ಮನ ಒಲಿಸಲೂ ಸರಕಾರಕ್ಕೆ ಸಾಧ್ಯವಾಗಬಹುದು.

ಬಿಸಿಸಿಐ ಒಳಗೆ ನಡೆದಿರುವ ಕೆಲವು ಪಟ್ಟಭದ್ರ ರಾಜಕಾರಣಿಗಳ 'ದರ್ಬಾರ್' ನೋಡಿದರೆ ಆರ್‌ಟಿಐ ಕಾಯ್ದೆಯಡಿಗೆ ಅದನ್ನು ತರಲೇಬೇಕು ಎನ್ನುವ ವಾದಕ್ಕೆ ಬಲ ಬರುತ್ತದೆ. ಕ್ರೀಡಾಪಟುಗಳೂ ಈ ಸಂಸ್ಥೆಗಳ ಆಡಳಿತ ಮಂಡಳಿಯಲ್ಲಿದ್ದರೆ ಅವರ ಅನುಭವದ ಲಾಭವೂ ಕ್ರೀಡಾಪಟುಗಳಿಗೆ ಲಭಿಸುತ್ತದೆ. ಹೊಸ ಮಸೂದೆ ಕ್ರೀಡಾ ಸಂಸ್ಥೆಗಳನ್ನು ಪೂರ್ಣವಾಗಿ ಸರಕಾರದ ನಿಯಂತ್ರಣಕ್ಕೆ ಒಳಪಡಿಸದಂತೆ, ಈ ಕ್ರೀಡಾಪಟುಗಳೂ ಕೆಲಸ ಮಾಡಬಹುದು. ಬಿಸಿಸಿಐ ಈ ಮಸೂದೆಯನ್ನು ವಿರೋಧಿಸುವುದರ ಹಿಂದೆ ಅದರ 'ನಿಯಂತ್ರಕರ' ಸ್ವಹಿತಾಸಕ್ತಿಯೇ ಅಡಗಿದೆ. 'ಬಿಸಿಸಿಐ ಖಾಸಗಿ ಸಂಸ್ಥೆ ಮಾತ್ರ' ಎಂದು ವಾದಿಸುವವರು ಅದು ಆಯ್ಕೆ ಮಾಡುವ ತಂಡಕ್ಕೆ 'ಭಾರತದ ತಂಡ' ಎಂದು ಹೆಸರಿಡುವುದು ಎಷ್ಟು ಸರಿ? ಅದನ್ನು 'ಬಿಸಿಸಿಐ ತಂಡ' ಎಂದೇ ಕರೆಯಬಹುದಲ್ಲವೆ? ಅಷ್ಟಕ್ಕೂ ಆಡಳಿತದಲ್ಲಿ, ಹಣಕಾಸಿನ ನಿರ್ವಹಣೆಯಲ್ಲಿ ಪ್ರಾಮಾಣಿಕವಾಗಿದ್ದಲ್ಲಿ ಈ 'ನಿಯಂತ್ರಕರು' ಆರ್‌ಟಿಐ ಕಾಯ್ದೆಗೆ ಏಕೆ ಅಂಜಬೇಕು?

■ ಬಿ.ಎಂ.ಹನೀಫ್

